**ಕರ್ನಾಟಕ ಸರ್ಕಾರ**
**ಕಂದಾಯ ಇಲಾಖೆ**

**ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಹಾಗೂ ಪುನರ್‌ನಿರ್ಮಾಣ ಕಾಯ್ದೆ– 2013ರ, ಕಲಂ-19(1) ಹಾಗೂ 19(2) ಮೇರೆಗೆ ಘೋಷಣೆ**

**ದಿನಾಂಕ:18-06-2022**

**ಸಂ: ಕಂಇ 01 ಎಕ್ಯೂಯು 2021**

ಇದರ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ವಾರಾಹಿ ಎಡದಂಡೆ ವಿತರಣಾ ನಾಲೆ-16ರ ಮೈನರ್-2ರ ನಾಲಾ ಪಂಕ್ತೀಕರಣಕ್ಕೆ ಬ್ರಹ್ಮಾವರ ತಾಲೂಕು **ಶಿರಿಯಾರ** ಗ್ರಾಮದ ಕೆಲವು ಜಮೀನುಗಳು ಭೂಸ್ವಾಧೀನತೆಗೆ ಅಗತ್ಯವಾಗಿದೆ ಎಂದು, ಈ ಯೋಜನೆಗೆ ಸಂಬಂಧಿಸಿದಂತೆ, ಭೂಸ್ವಾಧೀನಪಡಿಸುತ್ತಿರುವ ಜಮೀನುಗಳಿಗೆ ಕೇಂದ್ರ ಸರ್ಕಾರದ ಕಾಯ್ದೆ, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ -2013" ರ ಕಲಂ 6(2)ರ ಅಡಿಯಲ್ಲಿ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಇಲಾಖೆಯ ದಿನಾಂಕ 30-05-2005ರ ಅಧಿಸೂಚನೆಯನ್ವಯ ಪರಿಸರದ ಮೇಲಿನ ಪರಿಣಾಮ ನಿರ್ಧರಣದ ಅಂಶ SIA ಅನ್ವಯಿಸುವುದಿಲ್ಲವೆಂದು ಹಾಗೂ ಈ ಯೋಜನೆಗೆ ಸಂಬಂಧಿಸಿದಂತೆ EIA/SIA ವರದಿಯ ಮುಖ್ಯ ಅಂಶಗಳನ್ನು ಕಲಂ 19ರ ಪ್ರಕಾರ ಅಧಿಸೂಚನೆ ಹೊರಡಿಸುವ ಮುನ್ನ ಪ್ರಕಟಿಸುವುದು ಎಂಬುದಾಗಿ ಹೇಳಿ ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013 ಕಲಂ 11ರಡಿ ಕ್ರಮಾಂಕ ಎಲ್‌ಎಕ್ಯೂ ಸಿಆರ್ 30/2020(ಕ.ನಂ 56355) ದಿನಾಂಕ 28-07-2020 ರಲ್ಲಿ ಅಧಿಸೂಚಿಸಿ ಪ್ರಕಟಿಸಿದಂತೆ, ಭೂಸ್ವಾಧೀನತೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಹಾಗು ಪುನರ್ ನಿರ್ಮಾಣ ಕಾಯ್ದೆ-2013ರ ಕಲಂ 15 ರನ್ವಯ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದೇ ಇರುವುದರಿಂದ ಸದ್ರಿ ಪ್ರಕರಣದಲ್ಲಿ ಮುಂದುವರೆಯಲು ಸರ್ಕಾರದ ಪತ್ರ ಸಂಖ್ಯೆ ಕಂಇ 01 ಎಕ್ಯೂಯು 2021(ಇ) ದಿನಾಂಕ 30-01-2021 ರಡಿ ಸರ್ಕಾರದ ನಿರ್ದೇಶನ ನೀಡಲಾಗಿದೆ.

ಭೂಸ್ವಾಧೀನತೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಹಾಗು ಪುನರ್ ನಿರ್ಮಾಣ ಕಾಯ್ದೆ-2013ರ ಕಲಂ 19(1)ರಡಿ ಕೆಳಗೆ ಸೂಚಿಸಿರುವ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳುವುದು ಅಗತ್ಯವಿದೆ ಎಂದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿರುವುದರಿಂದ, ಮೇಲೆ ತಿಳಿಸಿದ ಉದ್ದೇಶಕ್ಕಾಗಿ ಜಮೀನುಗಳು ಅಗತ್ಯವಾಗಿದೆ ಎಂದು ಸದ್ರಿ ಅಧಿನಿಯಮ 19(1)ನೇ ಪ್ರಕರಣದ ಮೇರೆಗೆ ಈ ಮೂಲಕ ಘೋಷಿಸಲಾಗಿದೆ.

ಅದರಂತೆ ಸದ್ರಿ ಭೂಸ್ವಾಧೀನ ಅಧಿನಿಯಮ 3ನೇ ಪ್ರಕರಣ(ಜಿ) ಖಂಡದ ಮೇರೆಗೆ ಉಪವಿಭಾಗಾಧಿಕಾರಿಗಳು ಕುಂದಾಪುರ ಉಪವಿಭಾಗ, ಕುಂದಾಪುರ ಇವರನ್ನು ಸದ್ರಿ ಜಮೀನುಗಳಲ್ಲಿ ಭೂಸ್ವಾಧೀನತೆಯ ಮುಂದಿನ ಎಲ್ಲಾ ಕಾನೂನು ಕ್ರಮ ಮತ್ತು ಕ್ರಿಯೆಗಳ ಕುರಿತಂತೆ ಜಿಲ್ಲಾಧಿಕಾರಿಯವರ ಪ್ರಕಾರ್ಯವನ್ನು ನಿರ್ವಹಿಸುವ ಸಲುವಾಗಿ ಈ ಮೂಲಕ ನೇಮಕ ಮಾಡಲಾಗಿದೆ. ಹಾಗೂ ಸದ್ರಿ ಭೂಮಿಯ ಅರ್ಜನೆಗೆ ಸಂಬಂಧಿಸಿದ ಆದೇಶವನ್ನು ಪಡೆಯುಕೊಳ್ಳಲು ಸದ್ರಿ ಅಧಿನಿಯಮದ 20ನೇ ಪ್ರಕರಣದ ಮೇರೆಗೆ ನಿರ್ದೇಶನ ನೀಡಲಾಗಿದೆ.

ಕರ್ನಾಟಕ ಸರ್ಕಾರವು "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ನಿರ್ಮಾಣ (ಕರ್ನಾಟಕ ತಿದ್ದುಪಡಿ) ನಿಯಮಗಳು - 2020ನ್ನು" ಜಾರಿಸಿರುವುದರಿಂದ ಹಾಗೂ ಸದ್ರಿ ನಿಯಮಗಳು ರಾಜ್ಯಪತ್ರದಲ್ಲಿ ಪ್ರಕಟಗೊಂಡು ಜಾರಿಗೆ ಬಂದಿರುವುದರಿಂದ, ಕಲಂ 23 ಮತ್ತು ಕಲಂ -23(ಎ) ರಡಿ ನೀಡುವ ಅವಾರ್ಡ್ (ಐತೀರ್ಪಿನ) ಮೊತ್ತದಲ್ಲಿ ಮೂಲ ಕಾಯ್ದೆಯ ಅಧ್ಯಾಯ 2 ಮತ್ತು 3 ರಲ್ಲಿನ ಪುನರ್ವಸತಿ ಮತ್ತು ಪುನರ್ನಿರ್ಮಾಣದ

Scanned by CamScanner

ಅವಕಾಶಗಳ ಬದಲಾಗಿ ನೀಡುವ ಜಮೀನಿನ ವಿಸ್ತೀರ್ಣದ ಶೇಕಡವಾರು ಪ್ರಮಾಣದ 'ಇಡಿಗಂಟು" ಮೊತ್ತವನ್ನು ಐತೀರ್ಪು ತಯಾರಿಕಾ ಸಮಯದಲ್ಲಿ ನಿಗದಿಪಡಿಸುವುದಾಗಿ ತೀರ್ಮಾನಿಸಲಾಯಿತು.

ಈ ಮೇಲಿನ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಸದ್ರಿ ಅಧಿನಿಯಮದ 21ನೇ ಪ್ರಕರಣದ (1)ರಡಿ ಸಂಬಂಧಿಸಿದ ಹಿತಾಸಕ್ತಿದಾರರಿಗೆ ಭೂಸ್ವಾಧೀನತೆಯ ಜಮೀನು ಕಬ್ಜಾ ಪಡೆಯುವ ಉದ್ದೇಶದ ಬಗ್ಗೆ ಹಾಗೂ ಪರಿಹಾರದ ಕ್ಲೈಮು ಸಲ್ಲಿಸಲು ತಿಳುವಳಿಕೆಯ ನೋಟೀಸು ನೀಡಿ ಮುಂದಿನ ಕ್ರಮ ಜರುಗಿಸಲು ನಿರ್ದೇಶಿಸಿದೆ.

ಸದ್ರಿ ಅಧಿಸೂಚನೆಯಂತೆ, ಭೂಸ್ವಾಧೀನತೆಗೊಳಪಡಿಸುವ ಬ್ರಹ್ಮಾವರ ತಾಲೂಕಿನ ಶಿರಿಯಾರ ಗ್ರಾಮದ ಜಮೀನುಗಳ ವಿವರವನ್ನು ಸೂಚಿಸುವ ಒಂದು ನಕ್ಷೆಯನ್ನು ಮತ್ತು ಅಧಿಸೂಚನೆಯಲ್ಲಿ ಸಂಬಂಧಿಸಿದ ಎಲ್ಲಾ ಹಿತಾಸಕ್ತಿದಾರರ ಹಾಗೂ ಸಾರ್ವಜನಿಕ ಹಿತಾಸಕ್ತಿಗಾಗಿ ಅವಗಾಹನೆಗಾಗಿ ಭೂಸ್ವಾಧೀನಾಧಿಕಾರಿ ಮತ್ತು ಸಹಾಯಕ ಕಮೀಷನರ್ ಕುಂದಾಪುರ ಇವರ ಕಛೇರಿಯಲ್ಲಿ ಇಡಲಾಗಿದೆ.

**ಜಿಲ್ಲೆ : ಉಡುಪಿ** **ತಾಲೂಕು : ಬ್ರಹ್ಮಾವರ** **ಹೋಬಳಿ : ಕೋಟ** **ಗ್ರಾಮ : ಶಿರಿಯಾರ**

| ಕ್ರ.ಸಂ | ಹಿತಾಸಕ್ತಿ/ಇತರೆ ಹಿತಾಸಕ್ತಿದಾರರ ಹೆಸರು | ಸ.ನಂಬ್ರ | ತರಹೆ | ಚಕ್ಕುಬಂದಿ | | | | ಭೂಸ್ವಾಧೀನ ವಿವರ | | ಕಟ್ಟಡ/ ಬಾವಿ/ಇತರೆ | ಗಿಡ/ಮರ |
|---|---|---|---|---|---|---|---|---|---|---|---|
| | | | | ಉತ್ತರ | ದಕ್ಷಿಣ | ಪೂರ್ವ | ಪಶ್ಚಿಮ | ವಿಸ್ತೀರ್ಣ | ಮೌಲ್ಯ | | |
| 1 | ಮೂಕಮ್ಮ ಶೆಡ್ತಿ ಪಟ್ಟಾದಾರರು, ರುದ್ರಮ್ಮ ಶೆಡ್ತಿ ಬಿನ್ ಮೂಕಮ್ಮ ಶೆಡ್ತಿ ಕೊಳ್ಕೆಬೈಲು | 119/17 | ತರಿ | 119/7 | 119/74, 223/3 | 119/17 | 119/74 | 0.04 | 0.10 | - | ತೆಂಗು-5 |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಶ್ರೀನಿವಾಸ ಎ.)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಸ್ವಾಧೀನ-1&3)

PR-482

Scanned by CamScanner